# ಯುವಕರಲ್ಲಿ ಕಾತರ ಮೂಡಿಸಿದ ಕಾಂತಾರ

## ಸುರತ್ಕಲ್‌ನ ಎನ್‌ಐಟಿಕೆ ಸಹಿತ ಉನ್ನತ ವಿದ್ಯಾಲಯಗಳ ವಿದ್ಯಾರ್ಥಿಗಳು ಈಗ ನೇಮೋತ್ಸವದ ವೀಕ್ಷಕರು

■ **ಲೋಕೇಶ್** ಸುರತ್ಕಲ್
lokeshsurathkal@gmail.com

ಕರಾವಳಿಯಲ್ಲೀಗ ಜಾತ್ರೆ, ನೇಮೋತ್ಸವಗಳ ಸಮಯ. ಪ್ರತಿದಿನ ಒಂದಲ್ಲಾ ಒಂದು ಕಡೆ ಜಾತ್ರೆ, ದೈವಗಳ ನೇಮೋತ್ಸವ ನಡೆಯುತ್ತಿದ್ದು, ಎಲ್ಲೆಡೆ ಭಾರಿ ಸಂಖ್ಯೆಯಲ್ಲಿ ಯುವಜನರು ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಅದರಲ್ಲೂ ಮಂಗಳೂರು ಆಸುಪಾಸು ನಡೆಯುವ ದೈವಗಳ ನೇಮ, ಕೋಲಗಳಲ್ಲಿ ಸುರತ್ಕಲ್ ಎನ್‌ಐಟಿಕೆ ಸೇರಿದಂತೆ ಹಲವು ಉನ್ನತ ವಿದ್ಯಾಲಯಗಳ ವಿದ್ಯಾರ್ಥಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿರುತ್ತಾರೆ.

ಯುವಜನರಲ್ಲಿ ಜಾತ್ರೆ, ನೇಮಗಳ ಬಗ್ಗೆ ಉತ್ಸಾಹ, ಕಾತರ ಮೂಡುವುದಕ್ಕೆ ಕಾಂತಾರ ಸಿನಿಮಾ ಕಾರಣ ಎಂಬುದು ಸ್ಥಳೀಯರ ಅಭಿಪ್ರಾಯ. ನೇಮೋತ್ಸವಗಳು ರಾತ್ರಿ ವೇಳೆಯೇ ಹೆಚ್ಚಾಗಿ ನಡೆಯುತ್ತಿದ್ದು, ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಪಾಲ್ಗೊಳ್ಳುವುದಕ್ಕೆ ಸಹಕಾರಿಯಾಗಿದೆ. ಇರುಳಾಗುತ್ತಿದ್ದಂತೆ ಆಗಮಿಸುವ ವಿದ್ಯಾರ್ಥಿಗಳು ಮಧ್ಯರಾತ್ರಿವರೆಗೂ ಇದ್ದು ಬಳಿಕ ತೆರಳುತ್ತಾರೆ ಎನ್ನುತ್ತಾರೆ ಅವರು.

ಕೆಲವೇ ದಿನಗಳ ಹಿಂದೆ ಸುರತ್ಕಲ್ ಎನ್‌ಐಟಿಕೆಯಿಂದ ಸ್ವಲ್ಪವೇ ದೂರದಲ್ಲಿರುವ ಸುರತ್ಕಲ್‌ನ ಶ್ರೀಸದಾಶಿವ ಗಣಪತಿ ದೇವಾಲಯದಲ್ಲಿ ಜಾತ್ರೋತ್ಸವ ನಡೆಯಿತು. ಜಾತ್ರೆಯ ಸಂದರ್ಭ ಜುಮಾದಿ ದೈವಗಳ ನೇಮೋತ್ಸವ ನಡೆದಿದ್ದು, ಅದರ ವೀಕ್ಷಕರಲ್ಲಿ ಎನ್‌ಐಟಿಕೆಯ ವಿದ್ಯಾರ್ಥಿಗಳೇ ಅತ್ಯಧಿಕ ಸಂಖ್ಯೆಯಲ್ಲಿದ್ದರು. ಇಡ್ಯಾ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ಶನಿವಾರ ರಾತ್ರಿ ಪಿಲಿಚಾಮುಂಡಿ ದೈವದ ವಾರ್ಷಿಕ ನೇಮೋತ್ಸವ ನಡೆದಿದ್ದು, ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರಾಗಿದ್ದರು.



ಸುರತ್ಕಲ್ ಶ್ರೀ ಸದಾಶಿವ ಮಹಾಗಣಪತಿ ದೇವಸ್ಥಾನದ ನೇಮೋತ್ಸವದಲ್ಲಿ ಭಾಗವಹಿಸಿದ ಎನ್‌ಐಟಿಕೆ ವಿದ್ಯಾರ್ಥಿಗಳ ಸಹಿತ ಯುವ ಸಮುದಾಯ.

ಜುಮಾದಿ ಬಂಟ ದೈವಗಳ ಕೋಲದಲ್ಲಿ ರಾಜ್ಯ, ದೇಶ ಮತ್ತು ವಿದೇಶದಿಂದ ಬಂದಿದ್ದ ವಿದ್ಯಾರ್ಥಿಗಳಿದ್ದರೂ ಮುಂದಿನ ವರ್ಷ ಕೋಲಕ್ಕೆ ಬರುವ ಎಂಜಿನಿಯರಿಂಗ್ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದರೂ ಆಶ್ಚರ್ಯವಿಲ್ಲ.

**-ಡಾ ಎಸ್.ಜಿ. ಮಯ್ಯ**, ದೇವಸ್ಥಾನದ ಆನುವಂಶಿಕ ಮೊಕ್ತೇಸರ

ತಾನು 30-40 ವರ್ಷಗಳಿಂದ ಹಲವಾರು ಪ್ರಧಾನ ದೈವಗಳಿಗೆ ಕೋಲ ಕಟ್ಟುತ್ತಿದ್ದೇನೆ. ಇಡ್ಯಾದಲ್ಲಿ ಎರಡು ವರ್ಷದ ಹಿಂದೆ ನಡೆದಿದ್ದ ಧರ್ಮನೇಮದ ವರೆಗೆ ತಾನೇ ಪಿಲಿಚಾಮುಂಡಿಗೆ ಕೋಲ ಕಟ್ಟುತ್ತಿದ್ದೆ. ಈಗ ತನ್ನ ಅಳಿಯ ಕಟ್ಟುತ್ತಿದ್ದಾರೆ. ಕಾಂತಾರ ಸಿನಿಮಾ ಬಳಿಕ ಯುವಕರಲ್ಲಿ ದೈವ ಭಕ್ತಿ ಹೆಚ್ಚಾಗಿದೆ. ಇದನ್ನು ತಾನು ಅನೇಕ ಕೋಲಗಳಲ್ಲಿ ಕಂಡುಕೊಂಡಿದ್ದೇನೆ.

**- ಉಮೇಶ್ ಪದವಿನಂಗಡಿ,** ಹಿರಿಯ ಪಂಬದ

ಕಾಂತಾರ ಸಿನಿಮಾ ನಾನು ನೋಡದಿದ್ದರೂ ಅದರ ಬಗ್ಗೆ ಕೇಳಿ ತಿಳಿದಿದ್ದೇನೆ. ದೈವದ ಕಥೆಯನ್ನು, ಕಾರಣಿಕವನ್ನು ಚೆನ್ನಾಗಿ ಬಿಂಬಿಸಿದ್ದಾರೆ. ಇದರಿಂದ ಸ್ಫೂರ್ತಿ ಪಡೆದ ಕಾರಣದಿಂದಲೇ ಯುವಕರು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕೋಲ ವೀಕ್ಷಣೆಗೆ ಈಗ ಬರುತ್ತಿದ್ದಾರೆ. ಯುವಕರಲ್ಲಿ ದೈವಭಕ್ತಿಯನ್ನು ಪ್ರೇರೇಪಿಸುವುದಕ್ಕಾಗಿ ಇಂತಹ ಸಿನಿಮಾಗಳು ಇನ್ನಷ್ಟು ಬರಬೇಕಾಗಿದೆ.

**- ಕುಮಾರ ಪಂಬದ,** ಹಿರಿಯ ಜಾನಪದ ಕಲಾವಿದ

Udayavani, Date: 16/01/23, p. no - Nama Kudla - 01